ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 21.03.2024.

**ಮುಂದುವರೆದ ಪಾಟೀ ಸವಾಲುಃ** ಎದುರುದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

2 ನೇ ಎದುರುದಾರನ 2 ನೇ ಹೆಂಡತಿಯ ಹೆಸರು ಮಲ್ಲಮ್ಮ ಇರುತ್ತದೆ. ಅವರ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಮಲ್ಲಮ್ಮ ಮತ್ತು ನನ್ನ ಮಧ್ಯ ಯಾವುದೇ ತಕರಾರು ಇರುವುದಿಲ್ಲ. ದಾವಾ ಸ್ವತ್ತುಗಳ ಮೂರು ಸರ್ವೆ ನಂಬರಗಳಲ್ಲಿ ಭೀಮರಾವ್

ರವರ ಹೆಸರು ಮಾಲಿಕ ಮತ್ತು ಕಬ್ಜೆದಾರ ಅಂತ ಪಹಣಿಗಳಲ್ಲಿ ಇತ್ತು ಎಂದರೆ ಸರಿ. ಭೀಮರಾವ್ ತಂದೆ ತಿರಿಕೊಂಡ ನಂತರ ಭೀಮರಾವ್‌ನೇ ಕುಟುಂಬದ ಪ್ರಮುಖ ಇರುತ್ತಾನೆ ಎಂದರೆ ಸರಿ. 2012 ರಲ್ಲಿ 2 ನೇ ಎದುರುದಾರ ಒಂದು ಕೊಲೆ ಪ್ರಕರಣದಲ್ಲಿ ದಸ್ತಗಿರಿ ಆಗಿದ್ದ ಎಂದರೆ ಸರಿ.

ಶರಣಬಸಪ್ಪ ರವರು 2 ನೇ ಎದುರುದಾರನ 1 ನೇ ಹೆಂಡತಿ ಮಗ ಇರುತ್ತಾರೆ. ಸದರಿ ಶರಣಬಸಪ್ಪ, 2 ನೇ ಎದುರುದಾರ ಜೈಲಿನಲ್ಲಿ ಇರುವ ಕಾರಣ ಬಿಡಿಸುವ ಸಲುವಾಗಿ ಹಣದ ವ್ಯವಸ್ಥೆ ಮಾಡುತ್ತಿದ್ದ ಎಂದರೆ ಸರಿ. ಸದರಿ ಶರಣಬಸಪ್ಪ ರವರು ಹಣದ ಸಲುವಾಗಿ 5 ನೇ ಎದುರುದಾರರನ್ನು ಬೇಟಿಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಶರಣಬಸಪ್ಪ, 5 ನೇ ಎದುರುದಾರನ ಜೊತೆ ಕೂಡಿ ಸರ್ವೆ ನಂ.151 ಇದು 3 ಎಕರೆ 38 ಗುಂಟೆ ಜಮೀನಿನ ಮಾರಾಟದ ಬಗ್ಗೆ 2012 ರಲ್ಲಿ ಮಾತುಕತೆ ಮಾಡಿಕೊಂಡಿದ್ದಾ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಮಾರಾಟದ ಮಾತುಕತೆ ಸದರಿ ಶರಣಬಸಪ್ಪ, 5 ನೇ ಎದುರುದಾರ ಮತ್ತು 2 ನೇ ಎದುರುದಾರನ ಮೊದಲನೆ ಹೆಂಡತಿ ಮಂಗಳಾಬಾಯಿ ಮತ್ತು ಅವರ ಅಣ್ಣ ಬಾಬುರಾವ್ ಮುಳಗೆ, ಗುರು ಗಬ್ಬೂರು, ಸುನಿಲ್ ಹೀರೆಮಠ ರವರ ಸಮಕ್ಷಮ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಮಾತುಕತೆಯಲ್ಲಿ ಮೇಲೆ ಹೇಳಿದ ಜಮೀನಿನ್ನು ರೂ.4 ಲಕ್ಷ ಗೆ ಮಾರಾಟ ಮಾಡಬೇಕೆಂದು ತಿರ್ಮಾನ ಆಯಿತು ಎಂದರೆ ನನಗೆ ಗೊತ್ತಿಲ್ಲ. ತದನಂತರ ಸದರಿ ಶರಣಬಸಪ್ಪ, 5 ನೇ ಎದುರುದಾರ, ಬಾಬುರಾವ್ ಮುಳಗೆ ಮೂರು ಜನ ಕೂಡಿಕೊಂಡು 2 ನೇ ಎದುರುದಾರ ಜೈಲಿನಲ್ಲಿ ಇರುವ ಕಾರಣ, ಜೈಲಿಗೆ ಹೋಗಿ ತಿಳಿಸಿರುತ್ತಾರೆ ಎಂದರೆ

ನನಗೆ ಗೊತ್ತಿಲ್ಲ. ಅದೇ ರೀತಿ 2 ನೇ ಎದುರುದಾರ ಸದರಿ ಮಾತುಕತೆ ನನ್ನ ಒಪ್ಪಿಗೆ ಇರುತ್ತದೆ ಎಂದು ಮಾತು ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಆತ ಜೈಲಿನಲ್ಲಿ ಇರುವಾಗಲೇ ದಿಃ 07.08.2012 ರಂದು ನೋಂದಣಿ ಕ್ರಯ ಪತ್ರವನ್ನು 5 ನೇ ಎದುರುದಾರನ ಹೆಸರಿನಲ್ಲಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಖರೀದಿ ಹಿಡಿದಾಗಿನಿಂದಲೂ 5 ನೇ ಎದುರುದಾರನೇ ಮೇಲೆ ಹೇಳಿದ ಸರ್ವೆ ನಂಬರದಲ್ಲಿ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ನಾತೆಯಿಂದ 5 ನೇ ಎದುರುದಾರನ ಹೆಸರು ಮಾಲಿಕ ಮತ್ತು ಕಬ್ಜೆದಾರ ಅಂತ ಪಹಣಿಯಲ್ಲಿ ದಾಖಲಾಗಿದೆ ಎಂದರೆ, ಸಾಕ್ಷಿ 5 ನೇ ಎದುರುದಾರ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 5 ನೇ ಎದುರುದಾರ ತಾನು ಕ್ರಯಕ್ಕೆ ಕೊಂಡ ಜಮೀನಿನ ಮೇಲೆ ರೂ. 1,82,000/- ಹಣವನ್ನು ಕಡಗಂಚಿ ಎಸ್.ಬಿ.ಐ. ಬ್ಯಾಂಕಿನಿಂದ ಪಡೆದುಕೊಂಡಿದ್ದನ್ನು ನಾನು ಪರಿಶೀಲನೆ ಮಾಡಿಲ್ಲ. ನಾವು ದಾವೆ ಹಾಕುವ ಕಾಲಕ್ಕೆ 2 ನೇ ಎದುರುದಾರ ದಾವಾ ಸ್ವತ್ತುಗಳನ್ನು ಮಾರಾಟ ಮಾಡಬಾರದು ಎಂದು ಯಾವುದೇ ನಿರ್ಬಂದ ಕಾದ್ನೆಯನ್ನು ತೆಗೆದುಕೊಂಡಿಲ್ಲ ಎಂದರೆ, ಸಾಕ್ಷಿ ಈ ರೀತಿ ಮಾಡುತ್ತಾನೆ ಎಂದು ನಮಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

2 ನೇ ಎದುರುದಾರನ ಕೂಡಾ ಇದೆ ನ್ಯಾಯಾಲಯದಲ್ಲಿ ಒಸ್.ನಂ.2/2014 ಅಂತ ದಾವೆ ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಏನಾಯಿತು ಎಂದು ನಮಗೆ ಗೊತ್ತಿಲ್ಲ ಹಾಗೂ ನಾವು ಬಾಗಿಯಾಗಿರುವುದಿಲ್ಲ. ನಾವು ಹಾಕಿದ ಒಎಸ್.ನಂ.2/2010 ದಾವೆಯಲ್ಲಿ ಡಿಕ್ರಿಯಾಗಿ ನಂತರ ಆರ್.ಎ.ನಂ.71/2014 ರಲ್ಲಿ ಮತ್ತೆ ರಿಮಾಂಡ್ ಆಗಿದೆ

ಎಂದರೆ ನನಗೆ ಗೊತ್ತಿಲ್ಲ. ನಾವು ಹಾಕಿದ ದಾವೆ ರಿಮಾಂಡ್ ಆದ ನಂತರ 5 ನೇ ಎದುರುದಾರ ತನ್ನನ್ನು ಕೂಡಾ ಪಾರ್ಟಿ ಮಾಡಿ ಎಂದು ಅರ್ಜಿ ಸಲ್ಲಿಸಿದ್ದು, ಅದು ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ವಜಾ ಮಾಡವ ಕಾಲಕ್ಕೆ ನ್ಯಾಯಾಲಯ ಅಂತಿಮ ಡಿಕ್ರಿ ಬರೆಯುವ ಕಾಲಕ್ಕೆ 5 ನೇ ಎದುರುದಾರನ ಮಾಗನಿಯನ್ನು ಪರಿಗಣಿಸಬೇಕೆಂದು ಆದೇಶ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಶಿವಬಸಯ್ಯ ಹೀರೆಮಠ ರವರು ನನಗೆ ಗೊತ್ತಿಲ್ಲ. ಶಿವಬಸಯ್ಯ ಹೀರೆಮಠ ಹಾಗೂ 5 ನೇ ಎದುರುದಾರನ ಸಂಬಂಧ ಏನು ಎಂದು ನನಗೆ ಗೊತ್ತಿಲ್ಲ. ನಾವು ದಾವೆ ಹಾಕಿದ ನಂತರ ದಾವಾ ಜಮೀನುಗಳಿಗೆ ಇವತ್ತಿನವರೆಗೂ ಹೋಗಿರುವುದಿಲ್ಲ. ಸದರಿ ಶಿವಬಸಯ್ಯ ಹೀರೆಮಠ ರವರು ಸ್ವತಂತ್ರ ಹೋರಾಟಗಾರರು ಹಾಗೂ ಹಿರಿಯರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.151 ರಲ್ಲಿ ಸದರಿ ಶಿವಬಸಯ್ಯ ಹೀರೆಮಠ ರವರ ಸಮಾದಿ ಕಟ್ಟಲಾಗಿರುತ್ತದೆ ಹಾಗೂ ಅಲ್ಲಿ ಒಂದು ಗುಡಿಯನ್ನು ಕಟ್ಟಲಾಗಿರುತ್ತದೆ ಎಂದರೆ ಸರಿ. ಆದರೆ ಅದು ನಮ್ಮ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸುತಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರ ಮೇರೆಗೆ ಅವುಗಳನ್ನು ಕ್ರಮವಾಗಿ ನಿಆರ್-1 ಮತ್ತು ನಿಆರ್-2 ಎಂದು ಗುರುತಿಸಲಾಯಿತು.

ದಾವಾ ಶಡ್ಯುಲ್ ಸ್ವತ್ತುಗಳಲ್ಲಿ 2 ನೇ ಎದುರುದಾರನ ಭೀಮರಾವ್‌ನ ಪಾಲು ಎಂದರೆ ಸರಿ. ಸಾಕ್ಷಿ ಮುಂದುವರೆದು ಆತ ತನ್ನ ಪಾಲನ್ನು ಮಾರಿಕೊಳ್ಳಲಿ ಎಂದು ನುಡಿಯುತ್ತಾರೆ. 2 ನೇ ಎದುರುದಾರ ಕುಟುಂಬದ ಪ್ರಮುಖ ವ್ಯಕ್ತಿ ಇದ್ದ ಕಾರಣ ಆತನಿಗೆ ಕುಟುಬಂದ ಆಸ್ತಿಗಳನ್ನು, ಕುಟುಂಬದ ಹಿತದ ಸಲುವಾಗಿ ಮಾರಾಟ ಮಾಡುವ ಹಕ್ಕು ಇದೆ

ಎಂದರೆ ಸರಿಯಲ್ಲ. 2 ನೇ ಎದುರುದಾರ ಸರ್ವೆ ನಂ.151 ರ ಜಮೀನನ್ನು ಕುಟುಂಬದ ಹಿತದ ಸಲುವಾಗಿ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ನಾವುಗಳು ಮೇಲೆ ಹೇಳಿದ ಸರ್ವೆ ನಂಬರದ ವ್ಯವಹಾರ ರದ್ದು ಮಾಡಬೇಕೆಂದು ಕೇಸ್ ಹಾಕಿಲ್ಲ ಎಂದರೆ ಸರಿ.

5 ನೇ ಎದುರುದಾರನಿಗೆ ನಷ್ಟ ಉಂಟುಮಾಡಬೇಕೆಂಬ ಉದ್ದೇಶದಿಂದ ಆತನ ಹಕ್ಕುನ್ನು ನಿರಾಕರಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2012 ರಲ್ಲಿ ಸರ್ವೆ ನಂ.151 ರ ಜಮೀನಿನ ಮೌಲ್ಯ ಒಟ್ಟಾಗಿ ರೂ.4 ಲಕ್ಷ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಕರೆಗೆ ರೂ.50 ಲಕ್ಷ ಇತ್ತು ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ದಾವಾ ಸ್ವತ್ತಿನ ಬೆಲೆ ಇರುವುದಿಲ್ಲ ಹಾಗೂ ಕಟ್ಟು ಕಥೆ ಇದೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**